dc-521
T-P 26-1-58

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Reg No M 1299 - Sri - 58 ರ ಗಣಂರಾಜ್ಯ ಸಂಚಿಕೆ

42 nd Year - 'Satyavadi' Mysore

ಸತ್ಯವಾದಿ

ಸಂಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ

ಆಕರ್ಷಣೀಯ ಲೇಖನಗಳಿಗೆ

"ಸತ್ಯವಾದಿ" ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಭಾರತದ ಗಣರಾಜ್ಯ ಚಿರಾಯುವಾಗಿರಲಿ

ಸರ್ಕಾರವಿಲ್ಲ

ಲಾಹೋರು 24 — ಪಾಕಿಸ್ತಾನದಲ್ಲಿ ಈಗ ಸರ್ಕಾರವಾಗಲೀ, ಆಡಳಿತವಾಗಲಿ ಇಲ್ಲ ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಮಹಮದಾಲಿ ನುಡಿದಿರುವರು.

ದೆಹಲಿಯಲ್ಲಿ ಕನ್ನಡ ಶಾಲೆ ಸ್ಥಾಪಿತವಾಗುವದು

ರಥಸಪ್ತಮಿ ಪ್ರಯುಕ್ತ 27 ನೇ ತಾ|| ಸತ್ಯವಾದಿ ಪತ್ರಿಕೆಗೆ ರಜ

ಶಾಸನಭಂಗ ಚಳವಳಿ

ಬೆಂಗಳೂರು 24 — ತಮ್ಮ 16 ಅಂಶಗಳ ಪ್ರಣಾಳಿಕೆ ಬಗ್ಗೆ ಮುಖ್ಯ ಮಂತ್ರಿಗಳೊಡನೆ ಮೊಹಮ್ಮದಾಲಿ ವಿಫಲ ಆದುದರಿಂದ ಈ ತಿಂಗಳು 26 ನೇ ತಾ|| ನಿಂದ ಸೋಷಲಿಸ್ಟರು ಕಾನೂನುಭಂಗ ಚಳುವಳಿಯನ್ನು ಆರಂಭಿಸುವರು

ಸಂಬಳದೊಡನೆ ರಜಾ

ಮೈಸೂರು ಸರ್ಕಾರ ಗಣರಾಜ್ಯ ದಿನ ಸರ್ಕಾರಿ ಕೈಗಾರಿಕೆ ಸಂಸ್ಥೆಗಳ ನೌಕರರಿಗೆ ಸಂಬಳ ಸಮೇತ ರಜಕೊಟ್ಟಿದೆ

ರಾಣಿಯ ಕೊಲೆ

ಭೂಪಾಲ್ 24 — ಮೋರ್ನಿಯಾ ಜಿಲ್ಲೆಯಲ್ಲಿ ಪೋಲೀಸರ ಸಂಗಡ ಆದ ಹೋರಾಟದಲ್ಲಿ 30 ವರ್ಷದ ಕಳ್ಳರ ರಾಣಿ ಪುತ್ಲಿ ಗುಂಡಿನೇಟಿನಿಂದ ಮಡಿದಳು

ಸ್ವಂತ ಕೇರಿಯರ್

ಕಲ್ಕತ್ತಾ 24 — ಮೂರುವರೆ ವರ್ಷಗಳ ಅವಧಿಯಲ್ಲಿ ಭಾರತ ತನ್ನದೇ ಆದ ಏರ್ ಕ್ರಾಫ್ಟ್ ಕೇರಿಯರನ್ನು ಪಡೆಯುವದು

ಭಗವಂತನು ಸರ್ವರಿಗೂ ಸನ್ಮಂಗಳ ಉಂಟುಮಾಡಲೆಂದೂ, ಭಾರತ ಗಣರಾಜ್ಯ ಚಿರಾಯುವಾಗಿರಲೆಂದೂ ಗಣರಾಜ್ಯ ದಿನೋತ್ಸವ ಸಂದರ್ಭದಲ್ಲಿ ಪ್ರಾರ್ಥಿಸುತ್ತೇವೆ

ಸರ್ಕಾರದ ವಶಕ್ಕೆ

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಿಂದ ಈಗಿರುವ ವಿವಿಧ ಉದ್ದೇಶ ಆಹಾರ ಯೂನಿಟ್ಟನ್ನು ಮೈಸೂರು ಸರ್ಕಾರ ವಹಿಸಿಕೊಂಡು ಮೈಸೂರು ನಗರದಲ್ಲಿ ಸ್ಥಾಪಿಸಲು ನಿರ್ಧರಿಸಿದೆ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಿಲೆಟ್ ಸೋಪಿನಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲ
ಮೈಸೂರು ಸ್ಯಾಂಡಲ್ ಸೋಪಿನಲ್ಲಿ
ಇರುವುವು ಎಂದು ಖಚಿತವಾಗಿ ಹೇಳುತ್ತೇವೆ

ಎಲ್ಲಾ ಕಡೆಗಳಲ್ಲಿಯೂ ದೊರಕುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ * ರಾಜಾಜಿ ನಗರ * ಬೆಂಗಳೂರು

ಪ್ರಜಾರಾಜ್ಯ ದಿನದವಿಶೇಷ ಲೇಖನ

ಭಾರತದ ಆಹಾರ ಸಂಬಂಧ ಅಂಕಿಅಂಶಗಳು

ಎಷ್ಟು ನಿಷ್ಕೃಷ್ಟವಾಗಿವೆ ?

ಆಹಾರ ಸಂಬಂಧ ಅಂಕಿಅಂಶಗಳು ಹಸಿವನ್ನು ಇಂಗಿಸುವುದಿಲ್ಲ; ಆದರೆ ಆಹಾರದ ಅಗತ್ಯಗಳನ್ನು ಪೂರೈಸಲು ಯೋಜನೆಗಳನ್ನು ಸಿದ್ಧಗೊಳಿಸಲು ಅವು ನೆರವಾಗುತ್ತವೆ. ಈ ಅಂಕಿ ಅಂಶಗಳಿಂದಿದ್ದರೆ, ಕೊಂಚ ಅಥವಾ ಹೆಚ್ಚುವರಿಯಾನ್ನು ತಿಳಿದುಕೊಂಡು ಅದಕ್ಕನುಗುಣವಾಗಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದಿಲ್ಲ. ಪ್ರವಾಹ, ಕ್ಷಾಮ ಮುಂತಾದ ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ, ಆಲ್ಲಿ ಆಹಾರ ಧಾನ್ಯಗಳ ಕೊಂತೆ ಎಷ್ಟಿದೆ, ಇತರ ಪ್ರದೇಶಗಳಿಂದ ಎಷ್ಟು ಆಹಾರ ಧಾನ್ಯಗಳನ್ನು ಆ ಪ್ರದೇಶಗಳಿಗೆ ಪೂರೈಸಬಹುದು ಎಂಬುದನ್ನು ನಿರ್ಧರಿಸುವುದಕ್ಕೆ ಅಂಕಿ ಅಂಶಗಳು ಬೇಕು. ಬಳಕೆದಾರರು ಮತ್ತು ರೈತರು ಬ್ಬರಿಗೂ ಆಹಾರ ಧಾನ್ಯಗಳು ಯೋಗ್ಯ ದರದಲ್ಲಿ ಬರುವಂತೆ ಮಾಡುವುದಕ್ಕೆ ನಿರಂತರವಾಗಿ ಆಹಾರ ಧಾನ್ಯಗಳನ್ನು ಪೂರೈಸುವುದೂ ಸಹ ಸರಿಯಾದ ಅಂಕೆ ಅಂಶಗಳಿದ್ದಾಗಲೇ ಸಾಧ್ಯ.

ಹದಿನಾರನೆಯ ಶತಮಾನದಲ್ಲಿ ಭಾರತದಲ್ಲಿ ಆಹಾರ ಸಂಬಂಧ ಅಂಕಿಅಂಶಗಳನ್ನು ಸಂಗ್ರಹಿಸಲು ಒಂದು ವಿಧಾನವನ್ನು ಅನುಸರಿಸಲಾಗುತ್ತಿತ್ತು. ಭೂಕಂದಾಯದ ವಸೂಲಿಗಾಗಿ ತೋದರಮಲ್ಲನು ಪಟ್ಟವಾರಿಗಳನ್ನು ನೇಮಿಸಿದ್ದ. ಅವರು ಕಂದಾಯ ವಸೂಲಿ ಜೊತೆಗೆ ಸಾಗುವಳಿಗೊಳಗಾದ ಜಮೀನಿನ ವಿಸ್ತೀರ್ಣ ಹಾಗೂ ಬೆಳೆಯ ಅಂದಾಜನ್ನು ಒದಗಿಸುತ್ತಿದ್ದರು.

ಇದು ಅಂಕಿಅಂಶಗಳ ಸಂಖ್ಯೆಗಳನ್ನೂ, ನಾಲ್ಕಾರು ಸ್ಥಳಗಳಲ್ಲಿ ಫಸಲಿನ ಕೂಯ್ಲನ್ನು ಸಮೀಕ್ಷಿಸಿ ಅದರಿಂದ ಆಹಾರ ಧಾನ್ಯಗಳನ್ನು ಬೆಳೆಯುವ ಒಟ್ಟು ಕ್ಷೇತ್ರದಲ್ಲಿ ಬೆಳೆಯಬಹುದಾದ ಆಹಾರ ಧಾನ್ಯಗಳನ್ನು ಅಂದಾಜು ಮಾಡಲಾಗುವುದು. ಭಾರತದ ಕೃಷಿ ಸಂಶೋಧನ ಸಂಸ್ಥೆಯವರು ತೀವ್ರತರ ಸಂಶೋಧನೆಗಳನ್ನು ನಡೆಸಿದ ನಂತರ, ಈ ವಿಧಾನಗಳನ್ನು ಅಂಗೀಕರಿಸಿರುವರು. ಅಂತರರಾಷ್ಟ್ರೀಯ ಆಹಾರ ಮತ್ತು ಬೇಸಾಯ ಸಂಸ್ಥೆಯೂ ಈ ವಿಧಾನವನ್ನೇ ಅಂಗೀಕರಿಸಿದೆ. ಇತರ ಅನೇಕ ರಾಷ್ಟ್ರಗಳು ಇದೇ ವಿಧಾನವನ್ನು ಅನುಸರಿಸುತ್ತಿವೆ.

ವಿಧಾನದಲ್ಲಿ ಸುಧಾರಣೆ

ಆಹಾರ ಉತ್ಪಾದನೆಗೆ ಸಂಬಂಧಪಟ್ಟ ಅಂಕಿ ಅಂಶಗಳು ಪರಿಪೂರ್ಣವಾಗಿ ಕರಾರುವಾಕ್ಕಾಗಿರಲು ಸಾಧ್ಯವಿಲ್ಲ. ಕೈಗಾರಿಕಾ ಉತ್ಪಾದನೆ ಅಥವಾ ಬ್ಯಾಂಕ್ ಕ್ರೆಡಿಟ್ ಅಥವಾ ಹಣದ ಪೂರೈಕೆಗಳ ಸಂಬಂಧ ಅಂಕಿಅಂಶಗಳಂತೆ ಆಹಾರ ಸಂಬಂಧ ಅಂಕಿಅಂಶಗಳು ದೃಢವಾಗಿರಲು ಸಾಧ್ಯವಾಗುವುದಿಲ್ಲ. ಆದರೆ, ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಆಹಾರ ಧಾನ್ಯ ವಿಚಾರಣಾ ಸಮಿತಿಯು ಸೂಚಿಸಿರುವಂತೆ, ಭಾರತದಲ್ಲಿ ಆಹಾರ ಧಾನ್ಯಗಳ ಸಂಬಂಧದ ಅಂಕಿಅಂಶಗಳ ವ್ಯಾಪ್ತಿ ಹಾಗೂ ಗುಣಾಂಶ ಕ್ರಮೇಣ ಉತ್ತಮಗೊಳ್ಳುತ್ತಿವೆ. ಈಗ್ಗೆ ಹತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗ ಎಷ್ಟೋ ಸುಧಾರಿಸಿದೆ.

ಕಳೆದ ವರ್ಷದಲ್ಲಿ ಜೆಲಿಗಳು ಏರಿದ್ದರ ಪರಿಣಾಮವಾಗಿ, ಅಧಿಕೃತ ಅಂಕಿಅಂಶಗಳು ಸೂಚಿಸಿರುವಂತೆ, 1956–57 ರಲ್ಲಿ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆಯೇ ಎಂಬ ಅನುಮಾನವು ವಾಸ್ತವವಾಗಿ ಹುಟ್ಟಿಕೊಂಡಿದೆ. ಅದಂ ಜೊತೆಗೆ ವಿಚಾರಣಾ ಸಮಿತಿಯವರು ತಮ್ಮ ವೀಕ್ಷಣೆ ಮತ್ತು ವಿಚಾರಣೆಗಳ ಜೊತೆಗೆ ವಿವಿಧ ಸಂಶೋಧನಾ ಸಂಸ್ಥೆಗಳು ಯೋಜನಾ ಕಮಿಷನ್ನಿನ ಕಾರ್ಯಕ್ರಮ ಮೌಲ್ಯ ನಿರ್ಧಾರ ಸಮಿತಿಗಳ ಮೂಲಕವಾಗಿಯೂ ವಿಶೇಷ ಕ್ಷೇತ್ರ ಸಮೀಕ್ಷೆ ನಡೆಸಿದರು. ಅದಂ ಪರಿಣಾಮವಾಗಿ ಈ ಸಮಿತಿಯು 1956–57 ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು 1955–56 ರಲ್ಲಿದ್ದುದಕ್ಕಿಂತಲೂ ಉತ್ತಮವಾಗಿದೆ ಎಂಬ ತೀರ್ಮಾನಕ್ಕೆ ಬಂದಿರುವರು.

ಫಸಲುಗಳ ಕೊಯ್ಲು ಸಮೀಕ್ಷೆ

ಫಸಲುಗಳ ಕೊಯ್ಲು ಸಮೀಕ್ಷೆಯಿಂದ ಪ್ರತಿ ಎಕರೆ ಭೂಮಿಯಲ್ಲಿ ಬೆಳೆಯುವ ಸರಾಸರಿ ಬೆಳೆಯು ಅಂದಾಜನ್ನು ಕಮ್ಮಾಸಬಹುದು. ಆರಿಸಿದ ಕೆಲವು ಸ್ಥಳಗಳಲ್ಲಿ ಸುಗ್ಗಿಯಲ್ಲಿ ಸಂಪೂರ್ಣವಾದ ಸಮೀಕ್ಷೆಯನ್ನು ನಡೆಸಲಾಗುವುದು. ಸರಾಸರಿ ಬೆಳೆಯನ್ನೂ, ಕೊಯ್ದ ಬೆಳೆಯನ್ನೂ ವಾಸ್ತವವಾಗಿ ತೂಗಿ, ನಿರ್ಧರಿಸಲಾಗುವುದು. ಈ ವಿಧಾನದಲ್ಲಿ ಸಿದ್ಧಗೊಳಿಸಿದ ಒಂದು ರಾಜ್ಯದ ಸರಾಸರಿ ಬೆಳೆಯು ಅಂದಾಜಿನಲ್ಲಿ ಪ್ರತಿಶತ 3 ರಷ್ಟು ಮಾತ್ರ ಲೋಪದೋಷಗಳಿರುವುದು. ಆದ್ದರಿಂದ ಈ ಅಂದಾಜುಗಳ ಆಧಾರದ ಮೇಲೆ ಕೈಗೊಂಡ ಅಖಿಲ ಭಾರತ ಅಂದಾಜಿನಲ್ಲಿ ದೋಷವು ಗಮನಾರ್ಹವಾದ ಪ್ರಮಾಣದಲ್ಲಿರುವುದಿಲ್ಲ. ವಿಶ್ವಾಸಾರ್ಹವಾಗುವ ಮುನ್ನ ಉತ್ಪಾದನೆಯ ಸಂಬಂಧ ಅಂಕಿಅಂಶಗಳನ್ನು ಸಾಧಾರಣವಾಗಿ ಮೂರು ಅಂದಾಜುಗಳ ಮೇಲೆ ಸಂಗ್ರಹಿಸಲಾಗುತ್ತಿತ್ತು – ಸಾಗು ವಳಿಯಾಗುತ್ತಿರುವ ಭೂಮಿಯ ವಿಸ್ತೀರ್ಣ ಸಾಮಾನ್ಯ ಬೆಳೆ ಮತ್ತು ಪರಿಸ್ಥಿತಿ ಅಂಶ. ಈ ಪರಿಸ್ಥಿತಿ ಅಂಶವನ್ನು "ರೂಪಾಯಿನಲ್ಲಿ 12 ಆಣೆ" ಎಂದು ಚಾಕ್ಷುಷ ಪರಿಶೀಲನೆಯಿಂದಲೇ ನಿರ್ಧರಿಸಲಾಗುತ್ತಿತ್ತು; ಸಾಗುವಳಿಯಲ್ಲಿರುವ ಭೂಮಿಯ ವಿಸ್ತೀರ್ಣವನ್ನು ಪಟವಾರಿಯ ಕಾಗದಪತ್ರಗಳಿಂದ ಹಾಗೂ ಅಧಿಕಾರಿಗಳಿಂದ ಅಂದಾಜು ಮಾಡಲಾಗುತ್ತಿತ್ತು; ಹಲವು ಕ್ಷೇತ್ರಗಳಿಂದ ಈ ಸಂಬಂಧ ವರದಿಗಳು ಬರುತ್ತಿರಲಿಲ್ಲ; ಆ ಕ್ಷೇತ್ರಗಳ ಬಗೆಗೂ ಸಹ ಅಂದಾಜಿನ ಮೇರೆಗೆ ಮೇರೆಗೆ ಕೆಲಸ ನಡೆಸಲಾಗುತ್ತಿತ್ತು; ಈ ವಿಧಾನದಲ್ಲಿಯೇ ಬಹು ದಿನಗಳವರೆಗೂ ಕೆಲಸ ನಡೆಯುತ್ತಿದ್ದಿತು; 1949–50 ರಿಂದ ಕ್ರಮೇಣ ದೇಶದ್ಯಂತ ಆರಿಸಿದ ಸ್ಥಳಗಳಲ್ಲಿ ಸಮೀಕ್ಷೆ ನಡೆಸಿ ತನ್ಮೂಲಕವಾಗಿ ಅಂದಾಜನ್ನು ಸಿದ್ಧಿಗೊಳಿಸುವ ವಿಧಾನವನ್ನು ಅಚರಣೆಗೆ ತರಲಾಯಿತು.

ಅಂಕಿ ಅಂಶಗಳ ಸಂಗ್ರಹಣೆ

ಅಂಕಿಅಂಶಗಳ ಸಂಗ್ರಹಣೆಯಲ್ಲಿ ಸುಧಾರಣೆಯನ್ನು ತರಲು ಅಖಿಲ ಭಾರತ ಅಂದಾಜುಗಳನ್ನು ನೇಮಿಸಲು ಹಲವು ವ್ಯವಸ್ಥೆಗಳನ್ನು ಕೈಗೊಳ್ಳಲಾಯಿತು; ರಾಜ್ಯ ಸರ್ಕಾರಗಳ ರೆವಿನ್ಯೂ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ, ಸಾಗುವಳಿಗೆ ಒಳಗಾಗದ ಕ್ಷೇತ್ರದ ಅಂದಾಜನ್ನು ಸಂಗ್ರಹಿಸಲಾಗುವುದು; ಆದರೆ ಪಶ್ಚಿಮ ಬಂಗಾಳಾದಲ್ಲಿ ಮಾತ್ರ ಮಾದರಿ ("ಸ್ಯಾಂಪಲ್") ಸಮೀಕ್ಷೆ ವಿಧಾನವನ್ನು ಅನುಸರಿಸಲಾಗುತ್ತಿದೆ.

ರಾಜ್ಯಗಳಲ್ಲಿ ರೆವಿನ್ಯೂ ಇಲಾಖೆಗಳಲ್ಲಿರುವ ಅಂಕಿಅಂಶಗಳ ಸಂಗ್ರಾಹಕರು ತಾವು ಸಂಗ್ರಹಿಸಿದ ಅಂಕಿಅಂಶಗಳನ್ನು ಪರೀಕ್ಷಿಸಿ 'ಪಕ್ಕಾ' ಮಾಡುವರು; ಕೇಂದ್ರ ಸರ್ಕಾರದ ಬೇಸಾಯ ಮತ್ತು ಆಹಾರ ಮಂತ್ರಿ ಶಾಖೆಯು ನೆರವಿನೊಂದಿಗೆ ಈ ಸಂಗ್ರಹದ ಮೇಲ್ವಿಚಾರಣೆಯನ್ನಿಡುವ ಕಾರ್ಯವಿಧಾನವನ್ನೂ ಕೈಗೊಳ್ಳಲಾಗಿದೆ; ಇದರ ಜೊತೆಗೆ ಮಂತ್ರಿ ಶಾಖೆಯು ಅಧೀನದಲ್ಲಿರುವ ರಾಷ್ಟ್ರೀಯ ನಮೂನಾ ಸಮೀಕ್ಷೆ ಕಾರ್ಯಾಲಯವು ("ನ್ಯಾಷನಲ್ ಸ್ಯಾಂಪಲ್ ಸರ್ವೆ") ಈ ಕೆಲಸ ಮಾಡುತ್ತಿದೆ; ಅಖಿಲ ಭಾರತ ಅಂಕಿಅಂಶಗಳು ಕೇವಲ ಎಲ್ಲಾ ರಾಜ್ಯಗಳಿಂದ ಬಂದ ಅಂದಾಜುಗಳ ಸಂಕಲನವಾಗಿರುವುದು; ಅದ್ದರಿಂದ ಅಖಿಲ ಭಾರತ ಅಂಕಿಅಂಶಗಳನ್ನು ಎಲ್ಲಾ ಸಂಬಂಧ ಪಟ್ಟ ವ್ಯವಸ್ಥೆಗಳ ಅನುಮತಿಯಿಲ್ಲದೆ ಪರಿವರ್ತನೆ ಮಾಡಲು ಸಾಧ್ಯವಾಗಲಾರದು.

ಸೂಚ್ಯಂಕಗಳು

ಅಂಕಿ ಅಂಶಗಳ ಸಂಗ್ರಹಣದಲ್ಲಿ ಆದ ಸುಧಾರಣೆಯು ಇತ್ತೀಚಿನ ವರ್ಷಗಳ ಹಾಗೂ ಅದಕ್ಕೂ ಹಿಂದಿನ ವರ್ಷಗಳ ಸೂಚ್ಯಂಕಗಳ ನಡುವೆ ವೈತ್ಯಾಸವನ್ನು ಸೂಚಿಸಿದವು : ಈ ತೊಂದರೆಯನ್ನು ತಪ್ಪಿಸಲು ಸೂಚ್ಯಂಕಗಳ ಮಾಲಿಕೆಯೊಂದನ್ನು ಭಾರತ ಸರಕಾರದ ಆಹಾರ ಮತ್ತು ಬೇಸಾಯ ಶಾಖೆಯವರು ಪ್ರಕಟಿಸಿರುವರು ; ಆದ್ದರಿಂದ ಇತ್ತೀಚಿನ ವರ್ಷಗಳ ಉತ್ಪಾದನೆಯನ್ನು ಹಿಂದಿನ ವರ್ಷಗಳ ಉತ್ಪಾದನೆಯೊಂದಿಗೆ ಹೋಲಿಸಬೇಕಾದರೆ ಈ ಸೂಚ್ಯಾಂಕಗಳನ್ನು ಮಾತ್ರ ಉಪಯೋಗಿಸಬೇಕು.

ಇತ್ತೀಚಿನ ವರ್ಷಗಳಲ್ಲಿ ಆಹಾರಸಂಬಂಧ ಅಂಕಿಅಂಶಗಳ ನಿಷ್ಕೃಷ್ಟತೆಯನ್ನು ಉತ್ತಮಪಡಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಅಂಕಿಅಂಶಗಳನ್ನು ಮಾದಿ ಮಾಡುವ ಸಿಬ್ಬಂದಿಗೆ ತರಬೇತಿಯನ್ನು ನೀಡುವ ಕಾರ್ಯಕ್ರಮಗಳನ್ನು ಎಲ್ಲಾ ರಾಜ್ಯಗಳಲ್ಲಿಯೂ ಎರಡು ವರ್ಷಗಳ ಹಿಂದೆಯೇ ಪ್ರಾರಂಭಿಸಲಾಯಿತು. ಸುಮಾರು 30000 ಮಂದಿ ಪಟವಾರಿಗಳು, ಕನುಂಗೋಗಳು ಮತ್ತು ರೆವಿನ್ಯೂ ಸಿಬ್ಬಂದಿಗೆ ಅಂಕಿಅಂಶಗಳ ಸಂಗ್ರಹಣದಲ್ಲಿ ತರಬೇತಿ ನೀಡಲ್ಪಟ್ಟಿದೆ. ಪ್ರಾಥಮಿಕ ವಂದಿಗಾರರ ಕಾರ್ಯಕ್ಷೇತ್ರವನ್ನು ಕಡಿಮೆ ಮಾಡಿರುವುದರಿಂದ ಸ್ಥಳೀಯ ಅಂಕಿ ಸಂಖ್ಯೆಗಳನ್ನು ಮತ್ತಷ್ಟು ಕರಾರುವಾಕ್ಕಾಗಿ ಸಂಗ್ರಹಿಸಲು ಸಾಧ್ಯವಾಗಿದೆ. ಈ ಸಂಗ್ರಹದ ಬಗೆಗೆ ಸಮಗ್ರವಾದ ಮೇಲ್ವಿಚಾರಣೆಯನ್ನು ಇಟ್ಟುಕೊಳ್ಳಲಾಗಿದೆ

ಆಂತರರಾಜ್ಯ ಸಹಕಾರ

ಪ್ರತಿ ಮೂರು ತಿಂಗಳಿಗೊಂದು ಸಲ ರಾಜ್ಯಗಳ ಮುಖ್ಯ ಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಮುಖ್ಯಾಧಿಕಾರಿಗಳು— ಇಬ್ಬರು, ಮೂವರು ಅಥವಾ ನಾಲ್ಕು ಮಂದಿಗಳುಳ್ಳ— ಸಣ್ಣ ಗುಂಪುಗಳಲ್ಲಿ ಸವಿಾವೇಶಗೊಂಡ ವೈಯಕ್ತಿಕವಾಗಿ ಹೆಣಗಾಡಿಸುವ ಹಲವಾರು ಸಮಸ್ಯೆಗಳನ್ನು ಸವಿಾಲೋಚಿಸಿ, ಆ ಸವಸ್ಯೆಗಳನ್ನು ಸವಿಾಲೋಚಿಸಿ ಆ ಸವಸ್ಯೆಗಳಿಗೆ ಸಾಮೂಹಿಕ ಪ್ರಯತ್ನದಿಂದ ಮತ್ತು ಸಾಧನಸಂಪತ್ತುಗಳ ಸಹಾಯದಿಂದ ಪರಿಹಾರವನ್ನು ಕಂಡುಹಿಡಿಯುವರು

ನಮ್ಮ ಭಾರತ

ಭಾರತ ಗೃಹಮಂತ್ರಿ ಪಂಡಿತ ಪಂತರ ಪರ್ಸನಲ್ ಸೆಕ್ರೆಟರಿಯು ತಾ || 14 ರಂದು ರಾಯಪುರದ ಸರ್ಕೀಟು ಭವನದಿಂದ ನವದೆಹಲಿಗೆ ಗೃಹಮಂತ್ರಿಗಳ ಕೆಲಸಕ್ಕಾಗಿ ಟ್ರಂಕ್ ಕಾಲ್ ಬುಕ್ ಮಾಡಬೇಕಾಗಿಬಂದಿತೆಂದೂ, ಆದರೆ ಟ್ರಂಕ್ ಎಕ್ಸ್‌ಚೇಂಜಿನವರು ಸರ್ಕೀಟು ಭವನದಿಂದ ಕಳುಹಿಸಿದ ಹಿಂದಿನ ಟ್ರಂಕ್ ಕಾಲ್‌ಗಳ ಬಿಲ್‌ಗಳು ಪಾವತಿಯಾಗದಿರುವುದರಿಂದ ಬುಕ್ ಮಾಡಲು ಆಗುವುದಿಲ್ಲವೆಂದು ತಿಳಿಸಿದರೆಂದೂ, ಕಡೆಗೆ ಸೆಕ್ರೆಟರಿಯು ಕಲೆಕ್ಟರ ಸಹಾಯಪಡೆದು ಟ್ರಂಕ್ ಕಾಲ್ ಬುಕ್ ಮಾಡಬೇಕಾಯಿತೆಂದೂ ವಂದಿಯಾಗಿದೆ.

ಪತ್ರಿಕಾ ಸಮ್ಮೇಳನ

ಮೈಸೂರು ದಾಸ ಪ್ರಕಾಶದಲ್ಲಿ ನಿನ್ನೆ ಸಂಜೆ ಮೈಸೂರು ಪೌರಸಭೆಯ ಸಂಯುಕ್ತ ಪೌರಪಕ್ಷ ಪತ್ರಿಕಾ ಸಮ್ಮೇಳನ ಏರ್ಪಡಿಸಿತ್ತು.

ಪತ್ರಿಕಾ ಸಮ್ಮೇಳನಕ್ಕೆ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ನೂರ್ ಹುಸೇನ್, ಕಾರ್ಯದರ್ಶಿ ಶ್ರೀ ಎಂ.ಎಸ್. ತಿಮ್ಮಯ್ಯ, ಶ್ರೀ ಮಹಮದ್ ಸೇಟ್ ಮುಂತಾದವರು ಆಗಮಿಸಿದ್ದರು

ಪಕ್ಷದ ನಾಯಕರಾದ ಶ್ರೀ ಎಸ್.ಆರ್. ನೂರ್ ಹುಸೆನ್‌ರು ಮಾತನಾಡಿ, ಪೌರಸಭೆಯಲ್ಲಿ ಸಂಯುಕ್ತ ಪೌರಪಕ್ಷದ ಸದಸ್ಯರ ಸಂಖ್ಯೆ 15 ಇದ್ದಾಗ್ಯೂ ಕಾಂಗ್ರೆಸಿನವರು ವಿರೋಧ ಪಕ್ಷಕ್ಕೆ ಮಾನ್ಯತೆ ಇತ್ತಿಲ್ಲ ಅವರು ಮಾನ್ಯತೆ ಕೊಡದಿದ್ದರೆ ಬೇಡ ಎಂದು ನುಡಿದು ಈ ತಿಂಗಳು 28 ರಂದು ನಡೆಯುವ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯನ್ನು ಬಹಿಷ್ಕರಿಸುವೆದಾಗಿ ತಿಳಿಸಿದರು.

ಗ್ರೀನ್‌ವಿಲ್ (ದಕ್ಷಿಣ ಕೆರೊಲಿನ) 22 — 58 ವರ್ಷದ ನೀಗ್ರೋ ಗುಲಾಮನು, ತನ್ನ ಮನೆಗೆ ಶ್ವೇತಜನರು ನುಗ್ಗಿ, ತನ್ನ ಮೊಣಕೈಗಳನ್ನು ಕಟ್ಟಿ, ಹೊಡೆದು ಒದ್ದರೆಂದೂ, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಒಬ್ಬ ಶ್ವೇತಕಳ 7 ಮಕ್ಕಳನ್ನು ತಾವೂ ತಮ್ಮ ಪತ್ನಿಯೂ ಉಪಚರಿಸುತ್ತಿದ್ದಾಗ ಹೀಗೆ ಮಾಡಲಾಯಿತೆಂದೂ ಈ ಸಂದರ್ಭದಲ್ಲಿ ಶ್ವೇತರು ಮೇಲೆ ಹೂಡಲಾಗಿದ್ದ ವೊಖದ್ದಮೆಯಲ್ಲಿ ತಿಳಿಸಿದರು.

ಕೈಗಾರಿಕಾಭಿವೃದ್ಧಿಗೆ ಹೆಚ್ಚಿನ ಮಹತ್ವ

1957 ರಲ್ಲಿ ಕೈಗಾರಿಕಾತಿವೃದ್ಧಿ ಕಾರ್ಯಗಳು ಹೆಚ್ಚಿನ ಮಹತ್ವ ಪಡೆದದ್ದಷ್ಟೇ ಅಲ್ಲ; ಅವು ಹೆಚ್ಚಿನ ಬಿಂಬಲ ಹಾಗೂ ಗತಿಯನ್ನು ದೊರಕಿಸಿಕೊಂಡವು.

1956 ರಲ್ಲಿ, 133 ಪಾಯಿಂಟ್ಸುಗಳಿದ್ದ ಕೈಗಾರಿಕಾ ಉತ್ಪಾದನೆಯ ಸಾಮಾನ್ಯ ಸೂಚ್ಯಂಕವು, ಈ ವರ್ಷದ ಮೊದಲನೆಯ ಒಂಭತ್ತು ತಿಂಗಳಲ್ಲಿ 148 8 ಪಾಯಿಂಟುಗಳಿಗೇರಿತು.

ವಿದೇಶಿ ಧನವಿನಿಮಯವನ್ನು ಉಳಿತಾಯಮಾಡುವುದರ ಅಗತ್ಯವನ್ನು ಗಮನಕ್ಕೆ ತೆಗೆದುಕೊಂಡು ಮುಖ್ಯ ಕಚ್ಚಾವಸ್ತು ಮತ್ತು ಯಂತ್ರಭಾಗಗಳಿಗೆ ವಿದೇಶೀ ಆಮದನ್ನೇ ಅವಲಂಬಿಸಿರುವಂತಹ ಕೈಗಾರಿಕೆಗಳೂ ಸಹ ತಮ್ಮ ಉತ್ಪಾದನೆಯನ್ನು ಕಡಮೆ ಮಾಡಿಲ್ಲ.

ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ಉತ್ಪಾದನೆಯು ಹೆಚ್ಚಾಗಿದೆ : ಎಂಜಿನಿಯರಿಂಗು ಮತ್ತು ಯಂತ್ರೋಪಕರಣಗಳ ತಯಾರಿಕಾ ಸಂಸ್ಥೆಗಳು ಮುಂತಾದ 'ಹೊಸದಾಗಿ ಆರಂಭವಾದ' ಕೈಗಾರಿಕೆಗಳಲ್ಲಿಯೂ ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಗತಿಯಾಗಿದೆ : ಬಳಕೆಯ ವಸ್ತುಗಳ ಉತ್ಪಾದನೆ ಹೆಚ್ಚಿದೆ.

ಕುಲೂ ಕಣಿವೆಯಲ್ಲಿ ಜನಜಾಗೃತಿ

ಪೂರ್ವ ಪಂಜಾಬಿನ ಕಾಂಗಾರಾ ಜಿಲ್ಲೆಯಲ್ಲಿ ಪ್ರಾಕೃತಿಕ ರಂಗಸ್ಥಳದಂತಿರುವ ಕುಲೂ ಕಣಿವೆ ಇರುವುದು ; ಉತ್ತರ ರೈಲ್ವೇ ಅಂತಿಮ ರೈಲ್ವೇ ನಿಲ್ದಾಣವಾದ ಪಠಾಣಕೋಟೆಯಿಂದ ಹೊಂಟು ವೃಕ್ಷವಿಯ ಪರ್ವತಗಳನ್ನು ದಾಟಿ, ದಾರಿಯುದ್ದಕ್ಕೂ ಅಲೂಗೆಡ್ಡೆಯ ಫಸಲನ್ನು ವೀಕ್ಷಿಸುತ್ತಾ 200 ಮೈಲಿಗಳ ಪ್ರಯಾಸವನ್ನು ಮುಕ್ತಾಯಗೊಳಿಸಿದಾಗ ನಾವು ಕುಲೂ ನಗರವನ್ನು ಮುಟ್ಟಬಹುದಾಗಿದೆ ; ಕುಲೂ ನಗರದಲ್ಲಿ ಜನಪದ ಅಭಿವೃದ್ಧಿ ಕ್ಷೇತ್ರದ ಪ್ರಧಾನ ಕಾರ್ಯಾಲಯವಿರುವುದು ; ಕುಲೂ ಕಣಿವೆಯ ಪ್ರಕೃತಿ ಸೌಂದರ್ಯವು, ಈ ಕ್ಷೇತ್ರದಲ್ಲಿ ಕೈಗೊಳ್ಳಲಾಗಿರುವ ಜನಪದ ಅಭಿವೃದ್ಧಿ ಕಾರ್ಯಕ್ರಮವು ಎದುರಿಸುತ್ತಿರುವ ಎಡರು ತೊಡರುಗಳನ್ನು ಮರೆಮಾಚುವಂತಿಲ್ಲ.

'ಕಿನ್ನರ ಪ್ರದೇಶ' ವೆಂದು ಕರೆಯಲ್ಪಡುವ ಕುಲೂ ಕಣಿವೆಯು ಶತಮಾನಗಳಿಂದಲೂ ದೇಶದ ಉಳಿದ ಭಾಗಗಳಿಂದ ಪ್ರತ್ಯೇಕಸಲ್ಪಟ್ಟಿದೆ : ಶೀತಲ ವಾತಾವರಣದ ಈ ಕಣಿವೆಯು ಹಳ್ಳಕೊಳ್ಳಗಳಿಂದ ಕೂಡಿದೆ ; ಇಲ್ಲಿನ ನಿವಾಸಿಗಳು ಬಡವರು ಹಾಗೂ ನಿರಕ್ಷರಿಸ್ಥರು : ಕುಲೂ ಕಣಿವೆಯು ಇಡೀ ಭಾರತದಲ್ಲೇ ಅವೂರ್ಣಾಭಿವೃದ್ಧಿ ಹೊಂದಿರುವ ಪ್ರದೇಶವಾಗಿರುವುದು

ಈ ಪ್ರದೇಶದ ಅನ್ಯ ಪ್ರಾಕೃತಿಕ ಕಠಿಣತಮ ಪರಿಸ್ಥಿತಿಗಳು ಈ ಪ್ರದೇಶದಲ್ಲಿ ಕೈಗೊಂಡಿರುವ ಜನಪದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿಲ್ಲ ಕಾರ್ಯಕ್ರಮಗಳ ಫಲವಾಗಿ ಈ ಪ್ರದೇಶವು ದೇಶದ ಇತರ ಭಾಗಗಳೊಂದಿಗೆ ಸಂಬಂಧ ಪಡೆಯುವುದು ; ಕಠಿಣ ಪರಿಸ್ಥಿತಿ ಕಣ್ಮರೆಯಾಗುವುದು.

ಮಕ್ಕಳ ಸ್ವಭಾವ ವೈಪರೀತ್ಯ ಸುಧಾರಣೆ

ಈ ಚಿಕಿತ್ಸಾ ಕೇಂದ್ರವು (ಕ್ಲಿನಿಕ್) ಯಾವುದೇ ರೋಗಕ್ಕೆ ಹೆಸರಿಸುವ ನೀಡುವ ಗುರಿಯನ್ನು ಇಟ್ಟುಕೊಂಡಿಲ್ಲ ; ಇದು ಮಕ್ಕಳಲ್ಲಿನ ಮಾನಸಿಕ ಅಸಹಜತೆಯ ಮೂಲ ಕಾರಣಗಳನ್ನು ಕಂಡುಹಿಡಿದು, ಅವುಗಳಿಗೆ ಸೂಕ್ತ ಪರಿಹಾರವನ್ನು ನೀಡಲು ಪ್ರಯತ್ನಿಸುತ್ತದೆ — ನವದೆಹಲಿಯಲ್ಲಿ ನರ್ಸಿಂಗು ಕಾಲೇಜಿಗೆ ಸೇರಿದ ಮಕ್ಕಳ ಮಾರ್ಗದರ್ಶನ ಕೇಂದ್ರದ ಡೈರೆಕ್ಟರವರು ಮಾತುಗಳಿವು ; ಈ ಸಂಸ್ಥೆಯ ಕಾರ್ಯಾಚರಣೆಯನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ

ಕುಟುಂಬ ಯೋಜನಾ ಕಾರ್ಯಕ್ರಮಗಳು

ಜನಸಂಖ್ಯಾ ನಿಯಂತ್ರಣ ಸಂಬಂಧದಲ್ಲಿ ಭಾರತ ಸರ್ಕಾರದವರು ಕೈಗೊಂಡ ಕಾರ್ಯ ನೀತಿಯ ಅಂಗವಾಗಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಪ್ರಥಮ ಪಂಚವಾರ್ಷಿಕ ಯೋಜನಾವಧಿಯ ಕೊನೆಯ ಭಾಗದಲ್ಲಿ ಅಧಿಕೃತ ಕಾರ್ಯಕ್ರಮವನ್ನಾಗಿ ವ್ಯಾರಂಭಿಸಲಾಯಿತು ; ಈ ಕಾರ್ಯಕ್ರಮವು ಶ್ರೀಮತಿ ಪ್ರಾಮುಖ್ಯ ಗಳಿಸುತ್ತಿದೆ

ವುಡ್‌ಲ್ಯಾಂಡ್ಸ್ ಜಯಪ್ರದ 3 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್ — ಶಶಿಕಲಾ ಪಾತ್ರವಹಿಸಿರುವ

ನೌದೊಗಾರ = Nau Do Gyara

ಅತ್ಯಮೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಕೀರ್ತಿಯುತ 6 ನೇ ವಾರ

❁ ಮಾಯಾಬಜಾರ್ ❁

ಎಸ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ತೇಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 25—1—58 ರಿಂದ

ಕಾವೇರಿ (ತಮಿಳು) [ದಿನ 3 ಆಟಗಳು]

ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ

ಬೆಳಗಿನ ಪ್ರದರ್ಶನ 10—30 ಕ್ಕೆ — ತಾ || 24 ರಿಂದ 3 ದಿವಸಗಳು ಮಾತ್ರ

SIREN OF BAGDAD (Technicolor Picture)

SHAKTI SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಾಣಿದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ಯಾ 10 (ಹತ್ತೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣಾ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed& Published by Dharma Prachara Nirata M S Krishna Rao, at the Satyavadi Press Chamrajpuram Myrore

ವಿಜ್ಞಾನದ ಪ್ರಗತಿ

ಭಾರತದಲ್ಲಿ ವಿಜ್ಞಾನದ ಬಗ್ಗೆ ಜನದಲ್ಲಿ ಅಭಿರುಚಿ ಹೆಚ್ಚುತ್ತಿದೆ ಪಂಚ ವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾಭಿವೃದ್ಧಿಯ ಬಗ್ಗೆ ಹೆಚ್ಚು ವ ಹತ್ವವೀಯಲಾಗಿದೆ ಕೈಗಾರಿಕಾಭಿವೃದ್ಧಿಗೆ ವೈಜ್ಞಾನಿಕ ಸಂಶೋಧನೆಗಳು ಅಗತ್ಯವೆಂಬುದು ಅನುಭವ ವೇದ್ಯವಾಗಿರುವುದರಿಂದ ವೈಜ್ಞಾನಿಕ ಸಂಶೋಧನೆ ಮಹತ್ವ ಪಡೆದಿದೆ

ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲಿ ಅತಿ ಹಳೆಯದನ್ನು ಹತ್ತು ವರ್ಷಗಳ ಹಿಂದೆ ಸ್ಥಾಪಿಸಲಾಯಿತು ಈಗ ಅವನ್ನು ಸುಸಜ್ಜಿತಗೊಳಿಸಲಾಗಿವೆ



ಐ. ಟಿ. ಎಲ್. ಗ್ರೈಪ್ ಸಿರಪ್



ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್